Non-Payment of Travelling Allowance to the Staff of the Mobile Medical Unit, Puttur.

Q.—2694. Sri K. VENKATARAMANA GOWDA (Puttur).—

Will the Government be pleased to state :—

(*a*) whether it is a fact that travelling allowance of the staff of the Mobile Medical Unit, Puttur, has not been paid since December 1956 ;

(*b*) if so, the reasons therefor;

(*c*) whether they will take early steps to avert further inconvenience to the staff by paying the arrears ?

A.—Sri R. M. PATIL (Minister for Health).—

(*a*) Yes.

(*b*) As per Madras T.A. Rules, sanction of Government for payment of arrears of T.A. was necessary and accordingly Government in their Order No. LLH 854 MDA 57, dated 28th December 1957, have accorded the necessary sanction.

(*c*) This has been sanctioned as above.

Ordinances passed during the last two years.

Q.—2845 Sri C. K. RAJAIAH SETTY (Chickanaikanahalli).—

Will the Government be pleased to state :—

(*a*) the number of Ordinances passed in the year 1956-57 and 1957-58 ;

(*b*) out of the above Ordinances the number of Ordinances passed when the Assembly had not been prorogued ?

A.—Sri B. VAIKUNTA BALIGA (Minister for Labour and Legal Affairs).—

Year	*No. of Ordinances*
(*a*) 1956	3
1957	11
1958 (up to 22nd February 1958)	3

(*b*) Three during 1957 as the Legislative Council was not then in Session.

Issue of Licences for Toddy, Liquor and Ganja shops in Anekal Taluk.

Q.—2873. Sri J. C. RAMASWAMY REDDY (Anekal).—

Will the Government be pleased to state :—

(*a*) the number of toddy (sendhi), liquor and ganja shops in Anekal Taluk for which licenses have been issued;

(*b*) the names of places wherein such shops are situated in the said taluk ?

A.—Sri MOHAMED ALI (Minister for Excise and Rural Industries).—

(*a*)
Arrack shops	2
Ganja shops	1
Toddy shops.	4

(*b*)
Arrack shops :	1. Bannerghatta
	2. Chandapura
Ganja shops :	1. Bannerghatta
Toddy shops :	1. Bannerghatta
	2. Chandapura
	3. Sidihoskote
	4. Huskur.

PAPERS LAID ON THE TABLE.

SECRETARY.—I beg to lay on the Table of the House the Mysore Weights and Measures (Enforcement) Bill, 1958, as passed by the Legislative Council, and the Mysore Khadi and Village Industries (Amendment) Bill, 1958, as passed by the Legislative Council.

MYSORE VILLAGE PANCHAYATS AND LOCAL BOARDS BILL, 1958.

Motion to consider (contd.)

Sri S. Y. PATIL (Bijapur).—Since this Bill is going before the Select Committee, I will not go into details. I will express my ideas on principles only. In my opinion, this is a very important and revolutionary Bill.

(SRI S Y. PATIL)

It is not fair to abolish the District Local Boards. The District Local Boards are doing very good services in Bombay Karnatak areas. The District Councils may do the work of District Local Boards. According to this Bill the District Boards will be abolished. After abolition, I suggest that the District Local Boards engineers and their staff should get the same rank in the Public Works Department and other concerned Departments.

Regarding the panchayats, it is not necessary to give judicial powers to the panchayats. Because most of the people in the villages are uneducated. Unfortunately, there are party factions in every village.

According to the proposed Bill, any single member can bring no-confidence motion against the Sarpanch. It is necessary to provide in this Bill that more than 50 per cent of the members should agree for the no-confidence motion.

Regarding Taluk Boards, indirect election is not good. Members must be elected by direct election. Nominations should not be made. There should be reservations for the Scheduled Castes and Backward Classes, and also for the ladies. The M.L.A. of that constituency must be *ex-officio* member in the Taluk Board. The election of Taluk Boards and Panchayat Committees should be held at the same time, just like Assembly and Parliament elections.

Regarding District Board Councils, the President must be a non-official elected by the members. This Council should not be like an Advisory Boards; but it must have some powers as also funds and staff.

The village improvement work must be done by the Village Panchayat Committee. Other work outside the village area should be undertaken by the Taluk Board. All improvement work in the Taluk including N.E.S works also should be done under the supervision of the Taluk Board only. There must be a provision regarding District School Board in this Bill.

I my very thankful to you, Sir, for giving me an opportunity to express my ideas regarding this important Bill.

With these words, I finish my speech.

*Sri G. VENKATAJ GOWDA (Palaiyam).—This Bill before us has been brought to consolidate the various laws governing the local authorities in the various regions of the State to achieve uniformity in that respect by constituting the panchayats and local boards and district development councils and in doing so, that intention and object with which the Bill is brought, the object to see the need for rural development works and also to establish these bodies with less jurisdiction and providing adequate finances to carry on the functions and duties assigned to them, is maintained. As a matter of fact, the Planning Commission has been laying emphasis on this need to organise these village panchayats as the agency for village planning and development and provide for the development of the entire system of national planning. The other day Sri Linga Reddy was contending that we should not have Taluk Boards; that only advisory bodies as envisaged by the Planning Commission need be appointed by the Government and all those things. In this age of democracy, if we plead to retain that system of advisory committees, I am afraid to what consequences we are driving at all. He pleaded that factions would arise and that this system would aggravate factions in villages where they are existing now and even create new ones where no faction exists, but I wish to differ from him by saying that things are bound to improve in course of time because our rural population is uneducated and illiterate and it is up to the Government to create an atmosphere wherein people feel that they have a certain amount of responsibility to discharge, certain obligations to discharge and unless that is infused in the minds of the population, nothing can be done and this can only be done by decentralising power in the process of democratic decentralisation. By investing panchayats and local bodies with

more powers, Government can make them feel that they have to do a certain service to the nation. The spirit of the nation is to be inculcated into the rural population and that would be done by vesting more powers in the local bodies. I should also add that Madras Government has issued a white paper on the reformation of local bodies in which it is said that elementary education must be linked with the implementation of these various panchayats and local boards and it is proposed that the number of members in a panchayat should be between 10 and 20. We can have up to a maximum of 15 members in a village panchayat because even the panchayat in Madras has a maximum number of 15. The smaller the number in the panchayat the better the work turned out. It is better to have a maximum limit of 15 and increase the term of office from four years to five years.

So far as the allocation of revenues of the State to these various bodies is concerned, I wish to make one or two suggestions. Government now proposes to set apart 50 per cent of the total land revenue of the State to be distributed for these various village panchayats and local boards. But some of my friends pleaded that the entire land revenue should be allocated to these bodies, but if for any reason it is not possible to set apart the entire land revenue, at least 75 per cent of the land revenue can be set apart for being distributed to these bodies and the method and manner in which it is to be distributed is a thing which the Government have got to take into serious consideration because it is proposed that 15 per cent of the total revenue collection of the taluk should be given to the Taluk Boards and 10 per cent of the total revenue of the State should be set apart to be distributed between these various Taluk Boards in the manner in which Government from time to time determines and for the purposes for which Government intends. I think that would end in disaster, because I should say that the area in which more per capita revenue is derived, is likely to get more benefits. Supposing there is a Taluk Board which has got a population of 1½ lakhs : it gives a land revenue of one lakh of rupees; then it is entitled to get Rs. 15,000. Likewise, a taluk which has got a population of one lakh and a lakh of rupees revenue is also entitled to get Rs. 15,000. So where the per capita revenue is more, that area is likely to get more benefits. My contention is that the area which gives less per capita revenue should be given more. So from that point of view I should say that the allocation that is to be made by the Government so far as revenue is concerned should be distributed on the basis of population. So I suggest that 15 per cent of the total land revenue of the State should be given to each Taluk Board on poulation basis; another 15 per cent to be distributed equally among all the Taluk Boards and another 7½ per cent revenue should be set apart to be given to those Taluk Boards whose area is backward. Likewise, 37½ per cent revenue should be given to the various panchayats, which amounts to 75 per cent in all. In that way, if the Government allocates this revenue, I think a uniform level of development can be achieved. Otherwise, there will be uneven development so far as these areas are concerned. Government should place all these panchayats and local boards in a stable financial position. Otherwise they cannot be expected to do the work which has been assigned to them. Even the District Boards in old Mysore were not able to cater to the district needs. Unless the Government places these institutions in a stable, financial position, nothing can be turned out by them. There are very many provisions in the Bill, under which powers have been given to the officers with the result that no member in the panchayat or local boards would take any interest to do tangible work for raising the economic and social level of the rural population.

It is contemplated to appoint a Secretary to the village panchayat. Why is it necessary to appoint a paid Secretary to these panchayats? Even under the Madras Village Panchayats Act, it is the panchayat that appoints the clerk or the subordinate staff.

(SRI G. VENKATAI GOWDA)

Unless that is done, the functioning of the panchayat will not be smooth. Hence I suggest that instead of appointing a Secretary, it should be left to the panchayat itself whether there is any necessity to appoint a clerk or other subordinate staff for the smooth working of the panchayat.

So far as Taluk Boards are concerned, my friends have already submitted that there should be direct election. Except reservation for Scheduled Castes, there should be direct election and only the Executive Officer should look to the affairs of the Taluk Boards. So far as the District Development Council is concerned, in the white paper issued by the Madras Government it has been suggested that in addition to the powers that have been conferred under the provisions of the Bill, the District Development Council is to advise on all development schemes undertaken by the local boards as well as the departments which are under the control of the State Government, namely, food and agriculture, industries labour, co-operation, public works, health, education and local administration.

2-30 P.M.

Unless these functions are assigned to the District Development Council, I do not think any useful purpose will be served by the mere existence of the District Development Councils. It has been suggested that a non-official should be nominated as the President of the District Development Council and that the powers which are sought to be given to the Deputy Commissioner must be vested in the District Development Council. It has been provided in sub-section (4) of Section 30 that any dispute relating to the validity of the election of a Sarpanch under sub-section (1) or sub-section (2) shall be decided by the Deputy Commissioner and that the decision of the Deputy Commissioner thereon shall be final and no suit or other proceeding shall lie in any court in respect of any such decision. I think that this section is inconsistent with Section 202 wherein it is stated that an appeal lies to the Commissioner with revisional powers to the Government. Not only that, but I submit that the final decision should vest with the District Development Council and not with the Deputy Commissioner subject to the revision powers excercised by the Government. Suitable amendment will have to be made so far as this section is concerned.

As regards the powers given to the members of the panchayat, I would like to add one more power and it is as follows:

> "Any member shall have access to the records of the panchayat after giving notice to the President.
>
> Provided that the President may for reasons given in writing prevent him from having access."

Unless such a right is given to a panchayat member, he will not be in a position to be in touch with the day to day administration.

Sub-section (4) of Section 53 provides—

> "An appeal shall lie to the Deputy Commissioner from any order or direction or notice of the Panchayat under sub-section (2) and the decision of the Deputy Commissioner on such appeal shall be final."

This sub-section is also inconsistent with Section 202. I would urge that the power to take the final decision should be vested with the District Development Council subject to the revisional powers exercised by the Government.

Then, sub-section (4) of Section 57 also provides:

> "Any person aggrieved by the refusal to grant or renew a licence or by the suspension or cancellation of a licence under sub-section (3) may, within thirty days of the date of communication of the order, appeal to the Deputy Commissioner and the decision of the Deputy Commissioner on such appeal shall be final."

Thus, it will be seen that in various sections of this Bill the power is vested only with the Deputy Commissioner and his orders are supposed to be final. I do not know how the administration of our panchayats will go on if this state of affairs were allowed to continue. The District Development Council is there and it must be given the power to decide such matters subject to the revisional powers to be exercised by the Government.

Under Section 72, an appeal against assessment, etc., lies to the Standing Committee of the Taluk Board. I submit that there must be an appeal against the decision of the Standing Committee of the Taluk Board to the District Development Committee.

I have already stated that there is no necessity for appointing a Secretary. Even in Section 79 the powers of a Secretary are not enumerated.

In certain matters the jurisdiction of the court has been taken away. Supposing a party challenges the very legality of the assessment, he must have a right to go to a court and file a suit. I do not know why the Deputy Commissioners decision has been made final in this respect. I submit that that is not conducive to the growth of democracy. You may prohibit him from contending about the quantum of assessment, but if he challenges the very legality of the assessment, should he not be allowed to go before a court? Supposing a wrong person has been assessed, should he not have the right to go to a court and ventilate his grievance and say that he is not the person to be assessed?

As regards the dissolution of supersession of panchayat or Taluk Board, this power should be vested with the District Development Council. It is stated in sub-section (1) (ii) of Section 199 that 'such period may be longer than the term for which the members of the panchayat would have held office under section 24, if the panchayat had not been superseded under this section;' This should not be the case and such period should not be longer than the term for which the members would have held office.

Section 203 says that the Government or the Commissioner may call for and examine the record of any proceedings under this Act of any subordinate officer .... I would submit that the words 'The Government or the Commissioner *suo moto* or on application made by a party in this behalf' should also be incorporated.

The panchayats should also be invested with judicial powers. In Madras Karnatak, the panchayats are entrusted with such powers and they try minor criminal cases and impose a fine of Rs. 15. If this provision is not mad , we will be the losers. I request the Hon'ble Minister to bring in another Bill for this purpose or to make such a provision in this Bill itself.

With these observations, I submit that so many radical changes have got to be made to make this Bill a perfect one and I hope the Select Committee and the Hon'ble Minister concerned will do well in bringing a perfect Bill before the House.

Thank you, Sir.

*ಶ್ರೀ ಎ. ಎಸ್. ಪಾಟೀಲ್ (ನರಗುಂದ).—ಅಧ್ಯಕ್ಷರೇ, ಮೈಸೂರು ರಾಜ್ಯದ ವಿವಿಧಭಾಗಗಳಲ್ಲಿ ನಾಲ್ಕಾರು ತರಹ ಸ್ಥಾನಿಕ ಸಂಸ್ಥೆಗಳ ಕಾಯಿದೆಗಳು ಜಾರಿಯಲ್ಲಿದ್ದುವು. ಅವುಗಳನ್ನು ಒಂದುಗೂಡಿಸಿ ಇಡೀ ರಾಜ್ಯಕ್ಕೆ ಅನ್ವಯಿಸುವಂಥ ಸ್ಥಾನಿಕ ಸಂಸ್ಥೆಗಳ ಎಂದರೆ Village Panchayats and Local Boards ಕಾಯಿದೆ ಈಗ ಸಭೆಯ ಮುಂದೆ ಬಂದಿದೆ. ಈ ಕಾಯಿದೆಯನ್ನು ಈ ಸಭೆಯೊಳಗೆ ತರಲು ಎಷ್ಟೋ ವಿಳಂಬವಾದರೂ ಅನೇಕ ರಾಜ್ಯಗಳಲ್ಲಿ ಅಮಲಿನಲ್ಲಿದ್ದಂಥ ಕಾಯಿದೆಗಳನ್ನು ಅಭ್ಯಾಸಮಾಡಿ, ಅದರಲ್ಲಿಯ ಲೋಪದೋಷಗಳನ್ನು ಅರಿತುಕೊಂಡು ಅಲ್ಲಿಯ ಭಾವನೆಯನ್ನು ತಿಳಿದುಕೊಂಡು ಅತ್ಯುತ್ತಮರೀತಿಯ ಒಂದು ಕಾಯಿದೆಯನ್ನು ನಮ್ಮ ಸಭೆಯೊಳಗೆ ಇಟ್ಟಿದ್ದಾರೆ. ಆದರೆ ಏನೇ ಕಾಯಿದೆ ಮಾಡಲಿ ಅದರಲ್ಲಿ ಕೆಲವೊಂದು ದೋಷಗಳು ಇರುವುದು ಸಹಜ. ಅವುಗಳನ್ನು ನಮ್ಮ ಅನುಭವದಿಂದ ವಿಚಾರಮಾಡಿ ತಿದ್ದುಪಾಟುಮಾಡುವುದು ಜರೂರು ಉಂಟಾಗುತ್ತದೆ. ಆದರೆ ಈಗ ಯಾವ ಮಸೂದೆ ನಮ್ಮ ಮುಂದೆ ಇದೆ ಇದರೊಳಗೆ ಮುಂಬೈ ಕಾಯಿದೆಯೊಳಗೆ ಇದ್ದಂಥ ಕೆಲವು ಮಹತ್ವದ ಅಂಶಗಳನ್ನು ಸಹ ಅಳವಡಿಸಿಕೊಂಡಿದ್ದಾರೆ. ನಮ್ಮ ಮುಂಬೈ ಪ್ರಾಂತದಲ್ಲಿ Bombay Panchayat Actನ್ನು 1933ರಲ್ಲಿ ಮೊಟ್ಟಮೊದಲು ಜಾರಿಗೆ ತಂದದ್ದು. ಅನಂತರ 1939, 1947 ಮತ್ತು 1950ರಲ್ಲಿ ಅದರಲ್ಲಿ ಕೆಲವೊಂದು ಮಾರ್ಪಾಡುಗಳು ಆಗಿ ಈಗ progressive ಆದಂಥ ಒಂದು ಕಾಯಿದೆ ನಮ್ಮ ಭಾಗದಲ್ಲಿ ಜಾರಿಯಲ್ಲಿದೆ. ಆದರೆ ಮೈಸೂರು ಪ್ರಾಂತದಲ್ಲಿದ್ದಂತೆ ಈಗ ತಂದಿರುವ ಮಸೂದೆಯಲ್ಲಿಒಂದು ಪಂಚಾಯಿತಿ 1,500 ಜನಸಂಖ್ಯೆಯ ಒಂದು ಊರಿನಲ್ಲಿ ಅಥವಾ groups of villagesನಲ್ಲಿ ಇರಬೇಕು ಎಂದು ಹೇಳಿ

(ಶ್ರೀ ಎ. ಎಸ್. ಪಾಟೀಲ್)

ದ್ದಾರೆ. ಅದರ ಬಗ್ಗೆ ಕೆಲವೊಂದು ವಿಚಾರಗಳನ್ನು ತಮ್ಮ ಮುಂದೆ ಇಡಲು ನಿಂತಿದ್ದೇನೆ. ಇಲ್ಲಿ 1,500 ಜನಸಂಖ್ಯೆಯೆಂದು ಯಾವ ಅಂಕಿಯನ್ನೋ ಹಾಕಿದೆ, ಇದು ಸರಿಹೋಗುವುದಿಲ್ಲ. ನ್ಯಾಯವಾಗಿ ಉತ್ಪನ್ನದ ಬಾಬು ತೆಗೆದುಕೊಂಡು ಪಂಚಾಯಿತಿಯನ್ನು ರಚನೆ ಮಾಡಬೇಕೇ ಹೊರತು ಬರೀ 1,500 ಜನಸಂಖ್ಯೆಯೆಂದು ತೆಗೆದುಕೊಂಡರೆ ಕಷ್ಟವಾಗುತ್ತದೆ. ಮೊದಲನೆಯದಾಗಿ 1,000 ಜನ ಸಂಖ್ಯೆಗೆ ಒಂದು ಪಂಚಾಯಿತಿ ನಿರ್ಮಾಣವಾದರೆ ಉತ್ತಮ ಕೆಲಸ ಮಾಡುತ್ತದೆಂದು ಎಲ್ಲರಿಗೂ ಗೊತ್ತಿದೆ. 1,000 ಜನಸಂಖ್ಯೆಯಿದ್ದು 3,000ದಿಂದ 6,000 ರೂಪಾಯಿಗಳಷ್ಟು ಹಣದ ಉತ್ಪನ್ನವಿದ್ದರೆ ಪಂಚಾಯಿತಿಯ ಆಡಳಿತ ಸುಗಮವಾಗಿ ಸಾಗಿ ಉತ್ತಮ ಕೆಲಸ ಮಾಡುತ್ತಾ ಬಂದಿರುವುದು ನಮ್ಮ ಭಾಗದವರಿಗೆಲ್ಲಾ ಗೊತ್ತಿರುವ ವಿಷಯ. ಈ ಕಾರಣದಿಂದ ಬರೀ ಜನಸಂಖ್ಯೆಯನ್ನು ನೋಡಿಕೊಂಡು 1,500 ಜನರಿಗೆ ಒಂದು ಪಂಚಾಯಿತಿಯೆಂದು ಹೇಳಿರುವುದು ಸರಿಯಲ್ಲ.

[MR. DEPUTY SPEAKER in the Chair]

ಇನ್ನೊಂದು ತೊಡಕೇನೆಂದರೆ 1,500ಕ್ಕೆ ಒಂದು group ಪಂಚಾಯಿತಿ ಮಾಡಿದಾಗ ಎರಡು ಮೂರು ಪಂಚಾಯಿತಿಗಳಿಗೆ ಪರಸ್ಪರ ವ್ಯಾಜ್ಯ ಬೆಳೆದು ನಮ್ಮ ಪಂಚಾಯಿತಿಯವರು ಪ್ರೆಸಿಡೆಂಟರು ತಮ್ಮ ಹಳ್ಳಿಯವರು ಸರ್‌ಪಂಚ್ ಆಗಬೇಕೆಂದು ಪರಸ್ಪರ ಅವರವರೊಳಗೇ ವ್ಯಾಜ್ಯ ಹೊಡೆದಾಟ, ಬಡಿದಾಟ ಆಗಿ ಮನೆ ಸುಂಕ ಕೊಡದೆ, ತೆರಿಗೆ ಕೊಡದೆ ಎಷ್ಟೋ ಕಡೆ ಕೋರ್ಟಿಗೆ ಹೋಗಿರುವ ಸಂದರ್ಭಗಳಿವೆ. ಆದ್ದರಿಂದ ಉತ್ಪನ್ನದಮೇಲೆ ಮಾಡುವುದು ಮೇಲು. 800 ಅಥವಾ 1,000 ರೂಪಾಯಿ ಆದಾಯ ವಿರುವಂತೆ ಮಾಡುವುದು ಒಳ್ಳೆಯದು. ಇದರಿಂದ ಒಬ್ಬರಿಗೊಬ್ಬರಿಗೆ ತಿಕ್ಕಾಟ ತಪ್ಪುತ್ತದೆ. ಈಗಾಗಲೇ ನಮ್ಮ ಭಾಗದಲ್ಲಿ ಸಾವಿರ ಜನ ಸಂಖ್ಯೆಯ ಹಳ್ಳಿಗಳಿವೆ. ಆದ್ದರಿಂದ ಇದನ್ನೇ ಮುಂದೆಯೂ ಇಟ್ಟುಕೊಳ್ಳುವುದು ಒಳ್ಳೆಯದು. ಇದೇರೀತಿ ಯು.ಪಿ.ನಲ್ಲಿದೆ; ಮದ್ರಾಸಿನಲ್ಲಿ ಕೂಡ ಇದೆ. ಆದ್ದರಿಂದ ಇಲ್ಲಿ 1,500 ಎಂದು ಮಾಡಿರುವುದನ್ನು 1,000ಕ್ಕೆ ಇಳಿಸಬೇಕು. ಆಮೇಲೆ, group panchayat ಮಾಡಬೇಕೆಂದು ಒಂದು ಅಭಿಪ್ರಾಯ ಕೊಟ್ಟಿದ್ದಾರೆ. ನಮ್ಮ ಅಭಿಪ್ರಾಯ ತೆಗೆದುಕೊಳ್ಳುವುದಾದರೆ, ಆದಷ್ಟು ಇಂಥ ಘಟನೆಗಳನ್ನು ಕಡಮೆಮಾಡುವುದು ಒಳ್ಳೆಯದು. ಪ್ರತಿಯೊಬ್ಬರೂ ಸುಲಲಿತವಾಗಿ ವ್ಯಾಜ್ಯವಿಲ್ಲದೆ ಕೆಲಸ ಮಾಡುತ್ತಾರೆ. ಆದ್ದರಿಂದ minimum ಒಂದು ಸಾವಿರಕ್ಕೆ ಒಂದರಂತೆ ಇಡಬೇಕೆಂದು ನನ್ನ ಸೂಚನೆ.

ಇನ್ನು ಉಳಿದ obligatory ಕೆಲಸಗಳ ವಿಷಯದಲ್ಲಿಯೂ ನಮ್ಮ ಕಡೆ ಪಂಚಾಯಿತಿಗಳಲ್ಲಿ ಸರಿಯಾಗಿ ನಡೆಯುತ್ತಿದೆ. ಅಲ್ಲಿ ಜನರಲ್ಲಿ ಕಾರ್ಯೋತ್ಸಾಹವನ್ನುಂಟುಮಾಡಿ ಹುರುಪಿನಿಂದ ದುಡಿಯುವಂತೆ ಸ್ಕೀಮುಗಳನ್ನು ಹೊಂದಿಸಿಕೊಂಡು, ಯೋಜನಾ ಆಯೋಗದವರು ಯಾವ ನಿರ್ದೇಶ ಮಾಡಿದ್ದಾರೆ, ಹಳ್ಳಿಗಳ ಆಡಳಿತ, ಗ್ರಾಮ ರಾಜ್ಯ ಸರ್ವಾಂಗ ಸುಂದರವಾಗಿರಬೇಕೆಂಬ ರೀತಿಯಲ್ಲಿರಬೇಕೆಂದು ಏನು ಹೇಳಿದ್ದಾರೋ ಅದಕ್ಕೆ ಸರಿಯಾದಂಥ ಅಧಿಕಾರ ಕೊಟ್ಟಿದ್ದಾರೆ. ಬೊಂಬಾಯಿ ಕಾನೂನಿನಲ್ಲಿದ್ದಂಥ ಈ ಮಹತ್ವವಾದ ಅಂಶ ಇದರಲ್ಲಿಲ್ಲವೆಂದು ಕಾಣುತ್ತದೆ. ಬೊಂಬಾಯಿ ಕಾನೂನಿನಲ್ಲಿ ಸ್ಕೂಲ್ ಕಮಿಟಿಯೆಂಬುದನ್ನು ಮಾಡುವ ಏರ್ಪಾಡಿದೆ. ಈ ಸ್ಕೂಲ್ ಕಮಿಟಿಯಲ್ಲಿ ಐದು ಮಂದಿಗಳಿದ್ದು, ಗ್ರಾಮ ಶಾಲೆಯ ಮೇಲ್ವಿಚಾರಣೆ ನಡೆಸುವುದು, ಅವರು ಸರಿಯಾಗಿ ಕೆಲಸ ಮಾಡುತ್ತಾರೆಯೇ ಇಲ್ಲವೇ ಎಂದು ನೋಡುವುದಕ್ಕೆ ಸ್ಥಾನಿಕ ಅಧಿಕಾರಿಗಳನ್ನಿಟ್ಟಿರುವುದು ಬಹಳ ಚೆನ್ನಾಗಿದೆ; ಮತ್ತು ಅವಶ್ಯಕವಾದದ್ದಾಗಿದೆ. ಇದನ್ನು ಇಲ್ಲಿನ ಪಂಚಾಯಿತಿಗಳಿಗೂ ತಪ್ಪದೆ ಕೊಡಬೇಕು. ಮುಂದೆ ಯಾವರೀತಿ ಪಂಚಾಯಿತಿ ಮಾಡುತ್ತೀರೋ ಅದರ ಘಟನೆ ಯಾವರೀತಿಯಿದೆಯೋ ಗೊತ್ತಿಲ್ಲ. ಹಳ್ಳಿಗಳಲ್ಲಿ on the spotನಲ್ಲಿ ಸಾಕಷ್ಟು ಮೇಲ್ವಿಚಾರಣೆ ನಡೆಸುವುದಕ್ಕೆ ಒಂದು ವ್ಯವಸ್ಥೆ ಮಾಡುವುದು ಅವಶ್ಯಕ. ಅವರ ಕೆಲಸ ಹೆಚ್ಚಿನದಾದರೂ punishment ಮುಂತಾದ ವಿಷಯಗಳಲ್ಲಿ ಯಾವ ಅಧಿಕಾರವೂ ಇರುವುದಿಲ್ಲ. ಒಟ್ಟಿನಲ್ಲಿ ಇದಿಲ್ಲದಿದ್ದರೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ನಿಜವಾಗಿಯೂ ಕೊರತೆಯುಂಟಾಗುತ್ತದೆ.

ಎರಡನೆಯದಾಗಿ ಸರ್‌ಪಂಚರ ಚುನಾವಣೆಯನ್ನು ಮಾಡುವುದರೊಳಗೆ 30ನೆಯ ಕ್ಲಾಜಿನಲ್ಲಿ ಹೇಳಿರುವುದು ಸರಿಯಲ್ಲ. ಹಿಂದಿನ ಸರ್-ಪಂಚ್‌ನವರೇ ಸಭೆಯನ್ನು ಕರೆಯುವ ಹಾಗೆ ಇರಕೂಡದು. ತಾಲ್ಲೂಕಿನಲ್ಲಿ ಚೀಫ್ ಎಗ್ಸಿಕ್ಯೂಟಿವ್ ಆಫೀಸರಿರುತ್ತಾರೆ. ಏಕೆಂದರೆ ಅವರು ಸಭೆಯಲ್ಲಿ ಹಾಜರಿದ್ದು ಅವರೇ ಸಭೆಯನ್ನು ನಡೆಸಬೇಕೆಂದು ಹೇಳಿ ಇದರಲ್ಲಿ ಸೇರಿಸಬೇಕು. ತಮಗೇ ಗೊತ್ತಿದೆ, ಎಷ್ಟೋ ಸಲ ಹಳೆಯ ಸರ್-ಪಂಚ್‌ನವರು ತಮಗೇ ಸ್ಥಾನಮಾನ ಸಿಕ್ಕಬೇಕೆಂದರೆ ಸಭೆಯನ್ನೇ ಕರೆಯುವುದಿಲ್ಲ. ಇದರಿಂದಾಗಿ ಮೂರು ನಾಲ್ಕು ತಿಂಗಳುಗಳಕಾಲ ಚುನಾವಣೆ ಮುಂದೆ ಹೋಗಿ ತೊಂದರೆಯಾಗುತ್ತದೆ. ಆದ್ದರಿಂದ ತಾಲ್ಲೂಕಿನ ಚೀಫ್ ಎಗ್ಸಿಕ್ಯೂಟಿವ್ ಆಫೀಸರೇ ಈ ಸಭೆಯನ್ನು ಕರೆಯುವ ಅಧಿಕಾರ ಹೊಂದಿರಬೇಕೆಂದು ನಾನು ಸೂಚನೆ ಮಾಡುತ್ತೇನೆ.

ಇನ್ನು motion of no-confidenceಗೆ ಇಲ್ಲಿ ಅವಕಾಶ ಮಾಡಿದ್ದಾರೆ. ಇದು ಮಾತ್ರ ಇರಬಾರದು. ಏಕೆಂದರೆ, ಹಳ್ಳಿಗಳಲ್ಲಿ ಯಾರೋ ಒಬ್ಬರು ಸರ್-ಪಂಚಿಗೆ ವಿರುದ್ಧವಾದರೆ, ಸುಮ್ಮನೆ ತೊಂದರೆ ಕೊಡುವುದಕ್ಕಾದರೂ, ಗಡಿಬಿಡಿ ಎಬ್ಬಿಸುವುದಕ್ಕಾದರೂ, ಕೆಲಸ ಕಾರ್ಯಗಳನ್ನು ಕುಂಠಿತಗೊಳಿಸುವುದಕ್ಕಾದರೂ ಈ ರೀತಿ ಒಂದು ಅವಿಶ್ವಾಸ ಸೂಚನೆ ಕೊಡಬಹುದು. ಇಂಥದಕ್ಕೆ ಅವಕಾಶವಿರಬಾರದು, ಅಥವಾ ಅವಿಶ್ವಾಸ ಸೂಚನೆ ಕೊಡಬೇಕಾದರೆ ಇಷ್ಟು ಜನರು ರುಜು ಮಾಡಿ ಸರ್-ಪಂಚಿಗೆ ಕಳುಹಿಸಿ ಕೊಟ್ಟರೆ ಅದನ್ನು ಅವಿಶ್ವಾಸ ಗೊತ್ತುವಳಿಯೆಂದು ಭಾವಿಸುವಂತೆ ಮಾಡಬೇಕೆಂದು ಹೇಳುತ್ತೇನೆ.

ಆಮೇಲೆ, ಪಂಚಾಯಿತಿ ಸೆಕ್ರೆಟರಿಗಳನ್ನು ಕಮಿಷನರೇ appoint ಮಾಡುವಂತಿದೆ. ಅವರೇ ಒಂದು cadre ಮಾಡಿಕೊಂಡು ಅದರಿಂದ ನೇಮಕಮಾಡಬೇಕೆಂದು ಒಂದು ಕಡ್ಡಾಯವಿರುವಂತೆ ಕಾಣುತ್ತದೆ. ಅದಕ್ಕೆ ಬದಲಾಗಿ ಡೆಪ್ಯುಟಿ ಕಮಿಷನರು, Chairman of the District Council (ಒಂದು ವೇಳೆ non-official ಚೇರ್ಮನ್ನರಿದ್ದರೆ) ಅವರು-ಸೇರಿ ಒಂದು ಕಮಿಟಿ ಮಾಡಿಕೊಂಡು ಅವರೇ ಒಂದು ಕೇಡರ್ ತಯಾರಿಸಿ ಸೆಕ್ರೆಟರಿಯವರನ್ನು ಆರಿಸುವ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ; ಅಥವಾ ಡೆಪ್ಯುಟಿ ಕಮಿಷನರೊಬ್ಬರೇ ಮಾಡಿದರೂ ತೊಂದರೆಯಿಲ್ಲ. ಉದಾಹರಣೆಗೆ ಬೆಳಗಾಂ ಜಿಲ್ಲೆಯನ್ನು ತೆಗೆದುಕೊಂಡರೆ, ನಾಲ್ಕು ಡಿವಿಜನ್ ಸೇರಿ ಒಂದು ಕೇಡರ್

ಮಾಡಿದರೆ ವರ್ಗಾವರ್ಗಿ (Transfer) ಮಾಡಬಹುದು. ಒಟ್ಟಿನಲ್ಲಿ ಆಯಾ ಜಿಲ್ಲಾ ಮಟ್ಟದೊಳಗೇ ನೇಮಕಮಾಡುವಂತಿರಬೇಕು. ಆದ್ದರಿಂದ ಡೆಪ್ಯುಟಿ ಕಮಿಷನರು ಮತ್ತು ಚೇರ್ಮನ್ನರು ಸೇರಿ ಮಾಡುವ ಅಧಿಕಾರವಿರಬೇಕೆಂದು ಸೂಚನೆ.

ಮೂರನೆಯದಾಗಿ, ಇನ್ನೊಂದು ಮಹತ್ವದ ವಿಷಯವೆಂದರೆ, ಶೇಕಡ 25, ಶೇಕಡ 15, ಶೇಕಡ 10, ದಾವಾಷಾದಲ್ಲಿ ತಾಲ್ಲೂಕ್ ಬೋರ್ಡಿಗೂ ಪಂಚಾಯಿತಿಗೂ ಕೊಡುವುದೆಂದಿರುವುದನ್ನು ಬದಲಾಯಿಸಿ ಇಡೀ ಶೇಕಡ 80 ತೆಗೆದು ಒಂದೊಂದಕ್ಕೂ ಶೇಕಡ 40—ಶೇಕಡ 40ರಂತೆ ಕೊಡಬೇಕೆಂದು ನನ್ನ ಸೂಚನೆ. ಇದರಿಂದಾಗಿ ಗ್ರಾಮಾಭಿವೃದ್ಧಿ ಸರಿಯಾಗಿ ನಡೆಯುವಂತಾಗುತ್ತದೆಂದು ಹೇಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡ್ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಅವಕಾಶ ಕೊಡಬೇಕೆಂದು ಹೇಳುತ್ತೇನೆ. ಆಯಾಯ ತಾಲ್ಲೂಕಿನ M.L.A. ಮತ್ತು M.L.C. ಇವರು ತಾಲ್ಲೂಕು ಬೋರ್ಡಿನ ಎಕ್ಸ್ ಅಫಿಷಿಯೋ ಮೆಂಬರುಗಳಾಗಿ ಇರತಕ್ಕದ್ದು ಅತ್ಯಾವಶ್ಯಕ. ತಮ್ಮ ತಾಲ್ಲೂಕಿನ ವಿಕಾಸ ಹೇಗೆ ಆಗಬೇಕು, ಯಾವ ಅಭಿವೃದ್ಧಿ ಕೆಲಸ ಕೈಕೊಳ್ಳಬೇಕು, ಯಾವ ರಸ್ತೆ ಮಾಡಿಸಬೇಕು, ಯಾವ ಯಾವ ಸುಧಾರಣೆಗಳನ್ನು ಮಾಡುವುದು ಅತ್ಯವಶ್ಯವಾಗಿದೆ ಎಂಬುದಕ್ಕೆ ಆ ಪ್ರದೇಶದ ಸಂಪೂರ್ಣ ಪರಿಚಯವಿದ್ದು ಪರಿಸ್ಥಿತಿಯನ್ನು ತಿಳಿದುಕೊಂಡಿರುವ ಈ ಸದಸ್ಯರ ಸಲಹೆ ಬಹಳ ಪ್ರಯೋಜನವಾಗುವುದು. ಈ ಸಭೆಯ ಮಾನ್ಯ ಸದಸ್ಯರು ತಾಲ್ಲೂಕ್ ಬೋರ್ಡಿನ ಎಕ್ಸ್ ಅಫಿಷಿಯೋ ಸದಸ್ಯರಾಗುವುದು ಸಮರ್ಪಕವೂ ಸರಿಯಾದದ್ದೂ ಆಗಿದೆ. ಜಿಲ್ಲಾ ಮಟ್ಟದಲ್ಲಿ ಕುಳಿತುಕೊಂಡು consultative body ಇದ್ದ ಹಾಗೆ ಆಗಿ ಏನೂ ಕೆಲಸ ಮಾಡಲಿಲ್ಲ, ಸಮರ್ಪಕವಾಗಿ ಕೆಲಸ ಕಾರ್ಯಗಳು ನಡೆಯಲಿಲ್ಲ ಎಂಬ ಅಪವಾದ ಬರುವ ಹಾಗೆ ಇದೆ. ಎಕ್ಸ್ ಅಫಿಷಿಯೋ ಆಗಿರತಕ್ಕವರಿಗೆ ವೋಟಿಂಗ್ ಪವರ್ ಇರಬೇಕು. ತಾಲ್ಲೂಕಾ ಬೋರ್ಡು ಪ್ರೆಸಿಡೆಂಟ್ ಆಗಬಾರದು ಎಂದು ಕಾನೂನಿನಲ್ಲಿ ಸೇರಿಸದಿದ್ದರೂ ಅದಕ್ಕೆ ನನ್ನ ವಿರೋಧವಿಲ್ಲ. ಎರಡು ತಾಲ್ಲೂಕುಗಳ ಮತದಾರ ಕ್ಷೇತ್ರದಿಂದ ಚುನಾಯಿತರಾದ M.L.A. ಮತ್ತು M.L.C. ಅವರು ಎರಡೂ ತಾಲ್ಲೂಕಾ ಬೋರ್ಡುಗಳಲ್ಲಿ ಎಕ್ಸ್ ಅಫಿಷಿಯೋ ಆಗಿ ಉಳಿಯುವುದು ಅತ್ಯಗತ್ಯವಾಗಿದೆ. ತಾಲ್ಲೂಕಾ ಬೋರ್ಡುಗಳಿಗೆ ಸಣ್ಣ ಸಣ್ಣ ಅಧಿಕಾರಿಗಳನ್ನು ನೇಮಿಸತಕ್ಕ ಅಧಿಕಾರವು ಇರಬೇಕೆಂದು ನಾನು ಸೂಚಿಸುತ್ತೇನೆ. ತಾಲ್ಲೂಕಾ ಬೋರ್ಡು ಪ್ರೆಸಿಡೆಂಟರು, ಸ್ಟಾಂಡಿಗ್ ಕಮಿಟಿ, ಹೆಲ್ತ್ ಕಮಿಟಿ ಮುಂತಾದ ಕಮಿಟಿಗಳ ಚೇರ್‌ಮನ್ ಆಗಿರುತ್ತಾರೆ. ಅವರಿಗೆ ಆಡಳಿತ ಅನುಭವ ಬರಬೇಕು. ಅದಕ್ಕಾಗಿ ತರಪೇತಿ ಕೊಡಬೇಕು. ಮುನಿಸಿಪಲ್ ಸ್ಟಾಂಡಿಂಗ್ ಕಮಿಟಿ ಚೇರ್‌ಮನ್ ಬೇರೆ ಇರುತ್ತಾರೆ. ಪ್ರೆಸಿಡೆಂಟ್ ಬೇರೆ ಇರುತ್ತಾರೆ. ಆದರೆ ಸ್ಥಾನಮಾನಕ್ಕೆ ಸರಿಯಾಗಿ ಆಡಳಿತದಲ್ಲಿ ಮನಸ್ಸು ಹಾಕಿ ದುಡಿಯಲು ಅವರಿಗೆ ಅವಕಾಶ ಕೊಡಬೇಕು ಮತ್ತು ಆ ಪ್ರಕಾರ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ಮಹತ್ವದ ವಿಷಯ. ಡೈರೆಕ್ಟ್ ಎಲೆಕ್ಷನ್ ಇರಬೇಕು. ನಾಮಿನೇಷನ್ ಇರಬಾರದು. ಈ ಬಗ್ಗೆ ಈಗಾಗಲೇ ಮಾತನಾಡಿದ ಅನೇಕ ಮಿತ್ರರು ಚೆನ್ನಾಗಿ ಹೇಳಿದ್ದಾರೆ. ನನ್ನದೂ ಸಹ ಅದೇ ಅಭಿಪ್ರಾಯವಿದೆ. ತಾಲ್ಲೂಕಾ ಬೋರ್ಡಿಗೆ ಡೈರೆಕ್ಟ್ ಎಲೆಕ್ಷನ್ ಇರಬೇಕು. ನಾಮಕರಣಮಾಡತಕ್ಕಂಥಾದ್ದನ್ನು ಕೂಡಲೆ ತೆಗೆದು ಹಾಕಬೇಕು. ಕೆಲವರು ವಶೀಲಿ ಬಾಜಿ ಮಾಡಿ, ಬೆಂಗಳೂರಿಗೆ ಬಂದು ಮಂತ್ರಿಗಳಿಗೆ ಹೇಳಿ ಒತ್ತಾಯಪಡಿಸಿ, ನಾಮಕರಣದಲ್ಲಿ ತಮ್ಮ ಹೆಸರು ಬರುವಹಾಗೆ ಮಾಡಿಕೊಳ್ಳುತ್ತಾರೆ. ಆದುದರಿಂದ ನಾಮಕರಣವಿಧಾನ ಸರಿಯಾಗಿಲ್ಲ. ಚುನಾವಣೆಗಳನ್ನು ನಡೆಸಿದರೆ ಯಾರು ನಿಜವಾಗಿ ಕಾರ್ಯಕರ್ತನಾಗಿರುವನೋ ಅಂಥವನು ಚುನಾವಣೆಯಲ್ಲಿ ಆರಿಸಿ ಬರುವನು. ಆದುದರಿಂದ ಈ ನಾಮಕರಣ ಪದ್ಧತಿಯನ್ನು ತೆಗೆದುಹಾಕಬೇಕೆಂದು ನಾನು ಮತ್ತೊಮ್ಮೆ ಹೇಳಿ ನನ್ನ ಭಾಷಣ ಮುಗಿಸುತ್ತೇನೆ.

*ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಮಾನ್ಯ ಸಭಾಪತಿಗಳೆ, ಈ ದಿವಸ ನಮ್ಮ ಮುಂದೆ ಇರತಕ್ಕಂಥ ಮೈಸೂರು ರಾಜ್ಯದ ಗ್ರಾಮಪಂಚಾಯಿತಿ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟ ಮಸೂದೆಯ ಮೇಲೆ ಮಾತನಾಡಲು ಪ್ರಯತ್ನ ಮಾಡುತ್ತೇನೆ. ಹಾಗೆ ಮಾತನಾಡುವಾಗ ಈ ಬಿಲ್ಲನ್ನು ನಾನು ಸಂಪೂರ್ಣವಾಗಿ ಅನುಮೋದನೆ ಮಾಡಬೇಕೇ ಇಲ್ಲವೇ, ಈ ಬಿಲ್ಲಿನಲ್ಲಿ ಇರತಕ್ಕಂಥ ತೊಡಕುಗಳು ಏನು ಎಂಬುದನ್ನು ಸರಕಾರ ಮತ್ತು ಈ ಸಭೆ ಹಾಗೂ ಸಾರ್ವಜನಿಕರ ಗಮನಕ್ಕೆ ತಂದು, ತೊಡಕನ್ನು ಬಿಡಿಸಲು ಸರಕಾರ ಯಾವ ಮಾರ್ಗ ಹಿಡಿಯಬೇಕು, ಪ್ರಜಾಪ್ರಭುತ್ವವನ್ನು ಹೇಗೆ ಬೆಳಸಬೇಕು, ಹಾಗೂ ದಾರಿಯಲ್ಲಿರುವ ಕಲ್ಲುಮುಳ್ಳುಗಳನ್ನ ಹೇಗೆ ತೆಗೆಯಬೇಕು ಎಂಬ ಅಂಶಗಳ ಮೇಲೆ ಮಾತನಾಡಬೇಕೆಂದು ನಾನು ನಿಂತಿದ್ದೇನೆ.

ಈ ಮೊದಲು ಸರಕಾರದವರು ಒಂದು ತಿದ್ದುಪಡಿ ಮಸೂದೆಯನ್ನು ತಂದಾಗ್ಗೆ, ಕೆಲವು ಸದಸ್ಯರು ಏನು ಟೀಕೆ ಮಾಡಿದ್ದಾರೆಂದರೆ, ಒಂದು ವಿಸ್ತೃತವಾದ ಮಸೂದೆಯನ್ನು ಸಭೆಯ ಮುಂದೆ ತರುವುದಕ್ಕೆ ಸರಕಾರಕ್ಕೆ ಧೈರ್ಯವಿಲ್ಲ ಎಂದು ಸವಾಲು ಹಾಕಿದ್ದಾರೆ. ಆ ಸವಾಲನ್ನು ಎದುರಿಸುವುದಕ್ಕಾಗಿಯೇ ಧೈರ್ಯದಿಂದ ಈಗ ಈ ಬಿಲ್ಲನ್ನು ತಂದಹಾಗೆ ಇದೆ. ಏನೇ ಆಗಲಿ ಈ ಬಿಲ್ಲನ್ನು ತಂದಿದ್ದಕ್ಕೆ ಸಂತೋಷ. ಈಗಾಗಲೇ ಮಾತನಾಡಿದ ಅನೇಕ ಸದಸ್ಯರು ಈ ಮಸೂದೆಯಲ್ಲಿ ಇರತಕ್ಕ ಲೋಪ ದೋಷಗಳನ್ನು ಎತ್ತಿ ತೋರಿಸಿದ್ದಾರೆ. ವಿಶಾಲ ಮೈಸೂರು ರಾಜ್ಯ ರಚಿತವಾದ ನಂತರ, ಇಂಥ ಕಾನೂನನ್ನು ರಚಿಸುವಾಗ ಸರಕಾರ ಏನೇನು ತೊಡಕುಗಳು ಇವೆ, ಹಾಗೂ ಅವುಗಳನ್ನು ಹೇಗೆ ನಿವಾರಿಸಬೇಕು ಎಂಬುದನ್ನು ದೀರ್ಘವಾಗಿ ಆಲೋಚನೆ ಮಾಡಬೇಕು. ಕಾನೂನನ್ನು ಪಾಸು ಮಾಡಿಕೊಂಡು ಮರುಕ್ಷಣದಲ್ಲಿಯೇ ಪುನಃ ತಿದ್ದುಪಡಿ ಮಸೂದೆಯೊಂದನ್ನು ತರುವ ಹಾಗೆ ಆಗಬಾರದು. ಕಾನೂನು ರಚಿಸುವಾಗಲೇ ಏನೇನು ತೊಡಕುಗಳಿವೆ, ಅವುಗಳನ್ನು ಹೋಗಲಾಡಿಸಲು ಏನು ಮಾಡಬೇಕು ಎಂಬುದಕ್ಕೆ ದೀರ್ಘವಾಗಿ ಆಲೋಚನೆ ಮಾಡಬೇಕು. ಕನಿಷ್ಠ ಪಕ್ಷಕ್ಕೆ ಮುಂದಿನ ಹತ್ತು ಅಥವಾ ಹದಿನೈದು ವರ್ಷಗಳವರೆಗೆ ತಿದ್ದುಪಡಿ ಮಸೂದೆ ಬಾರದ ಹಾಗೆ ಕಾನೂನು ರಚನೆ ಮಾಡಬೇಕು. ಎಂಥ ಉತ್ತಮ ಕಾನೂನು ಮಾಡಿದ್ದಾರೆ, ಏನೂ ಲೋಪ ದೋಷಗಳಿಲ್ಲ ಎಂದು ಮುಂದಿನ ಪೀಳಿಗೆಯವರು ಅನ್ನುವ ಹಾಗೆ ಮಾಡಬೇಕು. ಅಂಥ ಒಳ್ಳೆ ಅಸ್ತಿಭಾರ ಹಾಕಬೇಕು. ಈ ಬಿಲ್ಲು ಸೆಲೆಕ್ಟ್ ಕಮಿಟಿಗೆ ಹೋಗತಕ್ಕದ್ದಿದೆ ಎಂದು ಹಾಗೆಯೇ ಬಿಡಬಾರದು. ಸೆಲೆಕ್ಟ್ ಕಮಿಟಿಯಲ್ಲಿ ಮಾಡತಕ್ಕ ಕೆಲಸ ಬೇರೆಯಾಗಿದೆ. ಸೆಲೆಕ್ಟ್ ಕಮಿಟಿಗೆ ಹೋಗುವುದಕ್ಕೆ ಮುಂಚಿತವಾಗಿಯೇ ದೀರ್ಘವಾಗಿ ಚರ್ಚೆಮಾಡಿ, ಕೂಲಂಕಷವಾಗಿ ವಿಮರ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡಬೇಕು. ಹೀಗೆ ದೀರ್ಘವಾಗಿ ಚರ್ಚೆಮಾಡ ತಕ್ಕಂಥಾದ್ದನ್ನು ಇಂತಿಷ್ಟೇ ಕಾಲದಲ್ಲಿ ಚರ್ಚೆಯನ್ನು ಮುಗಿಸಿಬಿಡಬೇಕೆಂದು ನಿರ್ಬಂಧ ಹಾಕುವುದು ಸರಿಯಲ್ಲ. ವಿರೋಧ ಪಕ್ಷದಲ್ಲಿಯ ಸದಸ್ಯರಾದ ನಾವು ಚಪಲಕ್ಕೋಸ್ಕರವಾಗಿ ಏನೂ ಮಾತನಾಡುವುದಿಲ್ಲ.

ಈ ಮಸೂದೆಯಲ್ಲಿ ಒಟ್ಟು 241 ವಿಧೇಯಕಗಳು ಇವೆ. 5ನೇ ಕ್ಲಾಜಿನಿಂದ 216(2)ನೆಯ ಕ್ಲಾಜಿನವರೆಗೆ ಎಷ್ಟು ದೋಷಪೂರ್ಣವಾಗಿದೆ ಎಂಬುದನ್ನು ಯೋಚನೆ ಮಾಡಿ ನೋಡಬೇಕು.

The House adjourned for Lunch at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair]

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಮಸೂದೆಯಲ್ಲಿ ಸ್ಥಳೀಯ ಸಂಸ್ಥೆಗಳ ವಿಚಾರವನ್ನು ಮೊದಲನೆಯ ಪುಟದಿಂದ ಕೊನೆಯ ಪುಟದವರೆಗೂ ನೋಡಿದೆ. ಅವಕ್ಕಿರುವ ಅಧಿಕಾರ, ಸೂಪರ್‌ವಿಷನ್ ಈ ಎಲ್ಲದರಲ್ಲೂ ಪ್ರತಿಯೊಂದು ಹಂತದಲ್ಲೂ ಡೆಪ್ಯುಟಿ ಕಮಿಷನರ ಕೈವಾಡವಿದೆ. ಡೆಪ್ಯುಟಿ ಕಮಿಷನರ ಕೈವಾಡವಿಲ್ಲದೆ ಪಂಚಾಯಿತಿ ಚುನಾವಣೆಯಾಗಲಿ, ಪಂಚಾಯಿತಿ ಕೆಲಸಮಾಡುವುದಾಗಲಿ, ತಾಲ್ಲೂಕು ಬೋರ್ಡು ಕೆಲಸವಾಗಲಿ ಯಾವುದೂ ಆಗುವುದಿಲ್ಲ. ಎಲ್ಲಕ್ಕೂ ಒಂದೇ ಮಂತ್ರ. ಡೆಪ್ಯುಟಿ ಕಮಿಷನರು ಮ್ಯಾಜಿಕ್‌ವ್ಯಾಂಡ್ ಇದ್ದಹಾಗೆ ಅವರಿದ್ದರೆ ಸ್ಥಳೀಯ ಸಂಸ್ಥೆಗಳು ಕೆಲಸ ಮಾಡುತ್ತವೆ, ಇಲ್ಲದಿದ್ದರೆ ಆಗುವುದಿಲ್ಲ ಎಂದು ಸರ್ಕಾರದವರು ಯಾವ ಭಾವನೆಯಿಂದ ಡೆಪ್ಯುಟಿ ಕಮಿಷನರು ಪ್ರತಿಯೊಂದು ಹಂತದಲ್ಲೂ ಇರಬೇಕೆಂದು ಈ ಮಸೂದೆಯಲ್ಲಿ ಹೇಳಿದ್ದಾರೋ ನನಗಂತೂ ಅರ್ಥವಾಗುವುದಿಲ್ಲ. ಈ ವಿಚಾರದಲ್ಲಿ ವ್ಯಾಖ್ಯಾನ ಮಾಡುವುದಕ್ಕೆ ಮುಂಚೆ ಎಲ್ಲಿ ದೋಷವಿದೆ, ಅದರಿಂದೇನಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರಲು ಪ್ರಯತ್ನ ಮಾಡುತ್ತೇನೆ.

ಕಾಯಿದೆಯಲ್ಲಿರತಕ್ಕ 5 (5)ನೇ ಕ್ಲಾಜಿನಲ್ಲಿ ಒಂದು ಗ್ರಾಮದಲ್ಲಿ ಚುನಾವಣೆಗಳು ನಡೆದಾಗ ಎಷ್ಟು ಜನರು ಪಂಚಾಯಿತಿಯಲ್ಲಿರಬೇಕೋ ಅಷ್ಟು ಜನರು ಅಲ್ಲಿ ಚುನಾಯಿತರಾಗದೆ ಹೋದರೆ, ಎಷ್ಟು ಜನರು ಚುನಾಯಿತರಾಗಿಲ್ಲವೊ ಅಷ್ಟು ಸ್ಥಾನಗಳಿಗೂ ಡೆಪ್ಯುಟಿ ಕಮಿಷನರು ನೇಮಕಗಳನ್ನು ಮಾಡಬಹುದು ಎಂದು ಇದೆ. ಇದು ನನಗೆ ಅರ್ಥವಾಗುವುದಿಲ್ಲ. ಪ್ರಜಾಪ್ರಭುತ್ವತತ್ವಗಳ ಪ್ರಕಾರ ಪಂಚಾಯಿತಿಗಳಿಗೆ ಚುನಾವಣೆ ನಡೆಯುವಾಗ ಹತ್ತು ಸ್ಥಾನಗಳು ಪಂಚಾಯಿತಿಯಲ್ಲಿದ್ದರೆ ಅದರಲ್ಲಿ ಆರು ಸ್ಥಾನಗಳಿಗೆ ಚುನಾಯಿತ ಸದಸ್ಯರು ಬಂದು ಇನ್ನು ನಾಲ್ಕು ಸ್ಥಾನಗಳು ಹಾಗೆಯೇ ಉಳಿದರೆ, ಆ ನಾಲ್ಕು ಜನರನ್ನು ಡೆಪ್ಯುಟಿ ಕಮಿಷನರು ನೇಮಕ ಮಾಡಬಹುದು ಎಂದು ಹೇಳುತ್ತಾರೆ. ಒಂದು ಕಡೆ ಪ್ರಜಾಪ್ರಭುತ್ವ ಬೇಕು ಎಂದು ಹೇಳುತ್ತಾ ಮತ್ತೊಂದು ಕಡೆ ನಾಮಕರಣ ಪದ್ಧತಿಯನ್ನು ಜಾರಿಗೆ ತಂದು ಡೆಪ್ಯುಟಿ ಕಮಿಷನರಿಗೆ ಸದಸ್ಯರನ್ನು ನೇಮಕ ಮಾಡುವ ಅಧಿಕಾರವನ್ನು ಕೊಡಬೇಕು ಎನ್ನುತ್ತಾರೆ. ಹೀಗಾದರೆ ಜನಗಳ ಕೈಯ್ಯಲ್ಲಿ ಎಷ್ಟರ ಮಟ್ಟಿಗೆ ಗ್ರಾಮಪಂಚಾಯಿತಿಗಳ ಅಧಿಕಾರವನ್ನು ಕೊಟ್ಟಂತಾಯಿತು ? ಮಹಾತ್ಮಗಾಂಧಿಯವರು ಗ್ರಾಮ ಸ್ವರಾಜ್ಯವನ್ನು ಒಂದು ಸುಭದ್ರವಾದ ತಳಹದಿಯ ಮೇಲೆ ಕಟ್ಟಬೇಕು ಎಂದು ಹೇಳುತ್ತಿದ್ದರು. ಡೆಪ್ಯುಟಿ ಕಮಿಷನರು ಸದಸ್ಯರನ್ನು ನೇಮಕ ಮಾಡುವಾಗ ಯಾವ ಆಧಾರದ ಮೇಲೆ ಮಾಡುತ್ತಾರೆ ? ನೇಮಕವಾದ ಸದಸ್ಯರಿಗೂ, ಚುನಾವಣೆಯಲ್ಲಿ ಜನರಿಂದ ಓಟು ಪಡೆದು ಬಂದ ಸದಸ್ಯರಿಗೂ ಏನು ವ್ಯತ್ಯಾಸ ? ಚುನಾವಣೆಯಲ್ಲಿ ಬಂದವರಿಗೆ ಏನೇನು ಹಕ್ಕುಗಳು ಇವೆಯೋ ಎಷ್ಟರಮಟ್ಟಿಗೆ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅವಕಾಶವಿದೆಯೋ, ಅದನ್ನೆಲ್ಲಾ ಇತರರಿಗೂ ಕೊಡುವುದು ಸರಿಯಲ್ಲ. ಯಾರೇ ಬರಲಿ ಅವರಿಗೆ ಚುನಾಯಿತರಾದ ಸದಸ್ಯರಂತೆಯೇ ಎಲ್ಲ ಅವಕಾಶಗಳೂ, ಅಧಿಕಾರಗಳೂ ಇವೆ ಎಂದು ಹೇಳುವುದು ಸರಿಯಲ್ಲ. ಚುನಾವಣೆಗಳಲ್ಲಿ ಯಾರೂ ಬರದೇ ಇದ್ದರೆ ಏನು ಮಾಡಬೇಕು, ಅದಕ್ಕೋಸ್ಕರ ಈ ರೀತಿ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿದ್ದೇವೆಂದು ಹೇಳಬಹುದು. ಇದು ಸರಿಯಲ್ಲ. ದೇಶದಲ್ಲಿ ಜನಜಾಗೃತಿಯನ್ನುಂಟುಮಾಡಬೇಕಾದದ್ದು ಸರ್ಕಾರದ ಮುಖ್ಯ ಕರ್ತವ್ಯ, ಹನ್ನೊಂದು ವರ್ಷಗಳಿಂದ ಅಧಿಕಾರ ಮಾಡುತ್ತಾ ಇರುವ ಪಕ್ಷ ಗ್ರಾಮ ಸ್ವರಾಜ್ಯವನ್ನು ಸ್ಥಾಪನೆಮಾಡಲು ಏನೇನು ಲೋಪ ದೋಷಗಳಿವೆ ಎಂಬುದನ್ನು ಕಂಡುಹಿಡಿದು ಅವುಗಳ ನಿವಾರಣೆಗೋಸ್ಕರ ಪ್ರಯತ್ನಮಾಡಬೇಕಾಗಿತ್ತು. ಇಷ್ಟು ಕಾಲವಾದರೂ ಆಡಳಿತದಲ್ಲಿರುವ ಪಕ್ಷ ಜನತೆಯನ್ನು ಏಕೆ ಎಚ್ಚರಗೊಳಿಸಿಲ್ಲ ! ಅದಕ್ಕೋಸ್ಕರ 5ನೆಯ ಕ್ಲಾಜಿನಲ್ಲಿ ಏನೊಂದು ದೋಷ (defect) ವಿದೆ, ಒಂದು ಕಡೆ ಚುನಾವಣೆ ಮಾಡಬೇಕೆನ್ನುವುದು, ಇನ್ನೊಂದು ಕಡೆ ನೇಮಕ ಮಾಡಬೇಕೆನ್ನುವುದು ಅದನ್ನು ತಪ್ಪಿಸಿ, ಕಡಮೆ ಬಿದ್ದ ಸ್ಥಾನಗಳಿಗೆ ಚುನಾವಣೆಗಳ ಮೂಲಕವೇ ಭರ್ತಿಮಾಡಲು ಸರ್ಕಾರ ಮನಸ್ಸು ಮಾಡಬೇಕು. ಈ ಮಸೂದೆಯು ಸೆಲೆಕ್ಟ್ ಕಮಿಟಿಗೆ ಹೋದಾಗ ಈ ವಿಷಯವನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಕ್ಲಾಜ್ ಎಂಟರಲ್ಲಿ ಹೀಗೆ ಹೇಳಿದೆ :

> "Appointment of an Administrative Committee or Administrator on failure to elect members of Panchayat."

ಮತ್ತೆ ಯಥಾ ಪ್ರಕಾರ ಬಂತು. ಒಂದು ಕೈಯ್ಯಲ್ಲಿ ಪ್ರಜಾಪ್ರಭುತ್ವತತ್ವಗಳ ಪ್ರಕಾರ ಗ್ರಾಮ ಸ್ವರಾಜ್ಯ ಎಂದರೆ ಊರಿನ ಆಡಳಿತವನ್ನು ನಿಮ್ಮ ಕೈಯ್ಯಲ್ಲಿ ಕೊಡುತ್ತೇವೆಂದು ಹೇಳಿ, ಚುನಾವಣೆಗಳು ಆಗದೆ ಹೋದರೆ ಮತ್ತೆ ಒಂದು ಆಡಳಿತ ಕಮಿಟಿಯನ್ನು ನೇಮಕಮಾಡುವುದಕ್ಕೆ ಡೆಪ್ಯುಟಿ ಕಮಿಷನರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ. ಇದು ಸೋಜಿಗದಲ್ಲಿ ಸೋಜಿಗ, ಅಚ್ಚರಿಯಲ್ಲಿ ಅಚ್ಚರಿಯಾಗಿದೆ. ದೇಶಕ್ಕೆ ಏನೋ ಒಳ್ಳೆಯದನ್ನು ಮಾಡುತ್ತೇವೆಂದು ತೃಪ್ತಿಕರವಾದ ಕಾಯಿದೆಯನ್ನು ತೆಗೆದುಕೊಂಡು ಬಂದಿದ್ದೇವೆ ಎಂದು ಜನರನ್ನು ಮರುಳುಮಾಡುವುದಕ್ಕೆ ಹೋಗಬಾರದೆಂದು ಹೇಳುತ್ತೇನೆ. Administrative Committee or Administrator, ನೇಮಕದ ವಿಚಾರವಾಗಿ ಹೇಳಬೇಕಾದರೆ ಹಿಂದಿನ ಕಾಲದಲ್ಲಿ ಕೊಡಗು ಒಂದು ಸಣ್ಣ ರಾಜ್ಯವಾಗಿತ್ತು. ಅದಕ್ಕೆ ಆಗಿನ ಇಂಡಿಯಾ ಸರ್ಕಾರದವರು ಒಬ್ಬ ಅಡ್ಮಿನಿಸ್ಟ್ರೇಟ

ರನ್ನು ನೇಮಿಸುತ್ತಿದ್ದರು. ಈಗ ನೀವು ಏನು ಮಾಡ ಬೇಕೆಂದಿದ್ದೀರಿ ಎಂದರೆ ಗ್ರಾಮ ರಾಜ್ಯವನ್ನು ಮಾಡಿ ಸಾಮಾನ್ಯ ಜನತೆಯ ಕೈಯಲ್ಲಿ ಅಧಿಕಾರವನ್ನು ಕೊಡ ಬೇಕೆಂದಿದ್ದೀರಿ. ಆದರೆ ಚುನಾವಣೆಗಳನ್ನು ಮಾಡುವು ದಕ್ಕೆ ಆಗದೆ ಹೋದರೆ ಅದರ ಆಡಳಿತವನ್ನು ನಡೆಸಲು ಒಂದು ಕಮಿಟಿಯನ್ನು ನೇಮಕ ಮಾಡುತ್ತೀರಿ ಅಥವ ಕಮಿಟಿಯನ್ನು ನೇಮಕವಾಡುವುದಕ್ಕೆ ಇಷ್ಟವಿಲ್ಲದೆ ಹೋದರೆ ಪಂಚಾಯಿತಿಯ ಅಧಿಕಾರವನ್ನು ಒಬ್ಬರಲ್ಲಿ ಕೇಂದ್ರೀಕರಣ ಮಾಡುತ್ತೀರಿ. Decentralisation of power, decentralisation of so many other things ಎಂದು ಏನೇನೋ ಹೇಳುತ್ತೀರಿ. ಆದರೆ ಅವ್ಯೊಂದೂ ಕಾರ್ಯಗತವಾಗುವುದಿಲ್ಲ. ನಾವೆಲ್ಲರೂ ಸೇರಿ ಸರಿಯಾದಂಥ ತಳಹದಿಯ ಮೇಲೆ ಗ್ರಾಮ ಸ್ವರಾಜ್ಯವನ್ನು ಸ್ಥಾಪನೆಮಾಡಿದರೆ ಹಿಂದೂ ಸ್ಥಾನಕ್ಕೆ ಲಭಿಸಿರತಕ್ಕ ಸ್ವಾತಂತ್ರ್ಯ ಮತ್ತೆ ಬೇರೆ ಯವರ ಕೈಯಲ್ಲಿ ಹೋಗದೆ, ಪರಾಧೀನವಾಗದೆ, ನಮ್ಮಲ್ಲೇ ಉಳಿಯುವಂತಾಗುತ್ತದೆ. ಆದುದರಿಂದ ಪಂಚಾಯಿತಗಳ ಆಡಳಿತವನ್ನು ನಡೆಸಲು ಕಮಿಟಿ ಗಳನ್ನು ನೇಮಿಸುವುದಾಗಲಿ, ಅಥವಾ ಅಡ್ಮಿನಿಸ್ಟ್ರೇಟ ರನ್ನು ನೇಮಿಸುವುದಾಗಲಿ, ಪ್ರಜಾಪ್ರಭುತ್ವದ ದಮ ನವೇ ಹೊರತು ಪ್ರಜಾಭುತ್ವದ ಬೆಳವಣಿಗೆಯಲ್ಲ. ಅದಕ್ಕೆ ಸಹಕಾರಿಯಲ್ಲವೆಂಬುದನ್ನು ಸರ್ಕಾರದವರು ತಿಳಿಯಬೇಕೆಂದು ಹೇಳುತ್ತೇನೆ.

ಹನ್ನೆರಡನೆಯ ಕ್ಲಾಜಿನಲ್ಲಿ Prohibition of simultaneous membership ವಿಷಯವಿದೆ. ಇದನ್ನು ನೋಡಿ ನನಗಂತೂ ಆಶ್ಚರ್ಯವಾಗುತ್ತಿದೆ. ಯಾರಾದರೂ ಒಬ್ಬ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು ಎರಡು ಕಡೆಯೂ ಚುನಾಯಿತನಾದರೆ, ಆಗ ಅವೆರಡ ರಲ್ಲಿ ಒಂದು ಕಡೆ ರಾಜೀನಾಮೆಯನ್ನು ಕೊಡಬೇ ಕೆಂಬುದು ಜಗತ್ತಿಗೇ ಗೊತ್ತಿದೆ. ಆದರೆ ಈಗ ನಮ್ಮ ಮುಂದೆ, ಪಂಚಾಯಿತಿ, ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಬೋರ್ಡ್ ಇವು ಮೂರನ್ನೂ ಒಟ್ಟು ಗೂಡಿಸಿ ಸಮನ್ವಯೀಕರಣಮಾಡಿ ತಂದಿರತಕ್ಕ ಕಾನೂ ನಿನಲ್ಲಿ ಎರಡು ಕ್ಷೇತ್ರಗಳಿಂದ ಯಾರಾದರೂ ಒಬ್ಬ ಸದಸ್ಯ ಗೆದ್ದು ಬಂದರೆ, ಗೊತ್ತುಪಡಿಸಿರತಕ್ಕ ಅವಧಿ ಯೊಳಗೆ ಯಾವುದಾದರೂ ಒಂದು ಕ್ಷೇತ್ರಗಳಲ್ಲಿ ರಾಜೀ ನಾಮೆಯನ್ನು ಕೊಡದೆ ಹೋದರೆ ಅಂಥವನ ಸದಸ್ಯ ತನ ಹೋಗುತ್ತದೆ; ಮತ್ತು ಆ ಕ್ಷೇತ್ರಗಳಲ್ಲಿ ಹೊಸ ದಾಗಿ ಚುನಾವಣೆಯನ್ನು ನಡೆಸಬೇಕು ಎಂದು ಹೇಳು ತ್ತಾರೆ. ಇದನ್ನು ನೋಡಿದರೆ ಸೋಜಿಗವಾಗುತ್ತದೆ. ಎರಡು ಕ್ಷೇತ್ರಗಳಲ್ಲಿ ಗೆದ್ದು ಬಂದರೆ ಯಾವುದಾದರೂ ಒಂದು ಕ್ಷೇತ್ರಕ್ಕೆ ರಾಜಿನಾಮೆ ಕೊಡುತ್ತಾರೆ. ಇದಕ್ಕೆ ಒಂದು ಕಾನೂನನ್ನು ಮಾಡಿ ಜನಗಳ ಕೈಯಲ್ಲಿ ಕೊಟ್ಟಾಗ ಯಾರಾದರೂ ನೋಡಿ ನಕ್ಕಾರು. ಇಂತಹ ಕ್ಲಾಜನ್ನು ಏಕೆ ಸೇರಿಸಿದ್ದಾರೆಯೋ ಅರ್ಥವಾಗುವು ದಿಲ್ಲ.

12ನೇ ಕ್ಲಾಸ್ ಈ ರೀತಿ ಇದೆ :

